ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನಪತ್ರಿಕೆ
ಹಾಸನ | E-mail : kannadapostnews@gmail.com | / ಕನ್ನಡ post | Price: ₹1
Vol.No.02 | Issue. 93 | Pages. 2 | Date: 12-03-2026, THURSDAY | RNI NO: KARKAN/2024/89601 | Kannada Daily
ಸಂಪುಟ : 02 - ಸಂಚಿಕೆ : 93 - ಪುಟಗಳು : 2 | 12-03-2026 | ಗುರುವಾರ | Ph: 8762954248 | ದರ : ₹1

# ರಾಗಿ ಖರೀದಿ ಅಕ್ರಮ: ಲೋಪ ತಡೆಗೆ ಡಿಸಿ ಸೂಚನೆ

## ರೈತರಿಂದ ಅಧಿಕ ಹಣ ವಸೂಲಿ ಆರೋಪ | ಕ್ರಮದ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೋಂದಣಿಯ ಜೇಷ್ಠತೆಯಂತೆ ರೈತರಿಂದ ಖರೀದಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ರಾಗಿ ತೆಗೆದುಕೊಳ್ಳಬೇಕು ಹಾಗೂ ನಿಗದಿತ ರೈತರಿಂದ ಮಾತ್ರ ಪಡೆಯಬೇಕು. ವ್ಯಾಪಾರಿ ಅಥವಾ ಮಧ್ಯವರ್ತಿಗಳಿಗೆ ಆದ್ಯತೆ ನೀಡಿದರೆ ನಿದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಬೆಂಬಲ ಬೆಲೆಯಡಿ ರಾಗಿ ಖರೀದಿಯಲ್ಲಿ ಆಗುತ್ತಿರುವ ತೊಂದರೆಗಳ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿ ಖರೀದಿ ಕೇಂದ್ರದಲ್ಲಿ ರಾಗಿಯ ಗುಣಮಟ್ಟ ಪರೀಕ್ಷೆ ಮಾಡಿಯೇ ತೆಗೆದುಕೊಳ್ಳಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು. ತೂಕದಲ್ಲಿ ಯಾವುದೇ ಲೋಪವಾಗದಂತೆ ಅಧಿಕಾರಿಗಳು ಎಚ್ಚರ ವಹಿಸುವಂತೆ ಸೂಚಿಸಿದರು.

ಖರೀದಿ ಕೇಂದ್ರದಿಂದ ಗೋದಾಮಿಗೆ ಸ್ಥಳಾಂತರಿಸಲು ಟ್ರಕ್‌ಗಳ ಸಂಖ್ಯೆ ಕಡಿಮೆ ಇದೆ. ದಿನವಿಡೀ ರೈತರು ಕಾಯಬೇಕಾದ ಸ್ಥಿತಿ ಎದುರಾಗಿದೆ ಎಂಬ ದೂರುಗಳು ಸಲ್ಲಿಕೆಯಾಗುತ್ತಿವೆ. ಆದ್ದರಿಂದ ಕೂಡಲೇ ಹೆಚ್ಚಿನ ಟ್ರಕ್‌ಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಖರೀದಿ ಕೇಂದ್ರದ ಆವರಣದಲ್ಲಿ ಕಡ್ಡಾಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಅಗತ್ಯವಿದ್ದರೆ ಉಪಹಾರದ ವ್ಯವಸ್ಥೆಯನ್ನು ಸಹ ಮಾಡಬೇಕು. ಖರೀದಿ ಕೇಂದ್ರದ ಆವರಣದಲ್ಲಿ ಶೌಚಾಲಯ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿಯ ಬೂಕನಬೆಟ್ಟ ಖರೀದಿ ಕೇಂದ್ರದಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಹಣ ನೀಡಿದರೆ ಮೊದಲು ಆದ್ಯತೆ ಮೇಲೆ ರಾಗಿ ಪಡೆಯುತ್ತಾರೆಂದು ವರದಿಯಾಗಿದೆ. ಅದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿದರು.



ಪ್ರತಿ ತಾಲ್ಲೂಕುಗಳಲ್ಲಿ ತಹಶೀಲ್ದಾರ್‌ಗಳು ಮೇಲುಸ್ತುವಾರಿ ಮಾಡಬೇಕು. ರೈತರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಮಳೆ ಬರುವ ಸಾಧ್ಯತೆ ಇದ್ದರೆ ಟಾರ್ಪಲ್ ವ್ಯವಸ್ಥೆ ಮಾಡಬೇಕು. ರೈತರ ವಾಹನದಿಂದ ರಾಗಿ ಇಳಿಸಲು ಹೆಚ್ಚಿನ ಹಣವನ್ನು ಪಡೆಯುತ್ತಿದ್ದಾರೆ ಎಂಬ ಆರೋಪ ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಅವರು ಮಾತನಾಡಿ, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೆಹಳ್ಳಿ ಹಾಗು ಬಾಗೂರು ಖರೀದಿ ಕೇಂದ್ರಗಳಿಗೆ ಭೇಟಿ ನೀಡಿದ್ದು, ರೈತರಿಗೆ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಕೂಡಲೇ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್ ಕುಮಾರ್ ಸಂಗಾವಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ವಿಮಾನ ನಿಲ್ದಾಣ: ಕಾಮಗಾರಿ ತ್ವರಿತಗತಿಯಲ್ಲಿ ಸಾಗಲಿ

ಹಾಸನ: ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಪರಿಹಾರ ಬಿಡುಗಡೆಗೆ ಅಗತ್ಯ ಕ್ರಮ ವಹಿಸಲಾಗುವುದು. ಬಾಕಿ ಕಾಮಗಾರಿಗೆ ವೇಗ ನೀಡಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಹಣಕಾಸು ಇಲಾಖೆಯ ಹಣಕಾಸು ಸುಧಾರಣೆಯ ಕಾರ್ಯದರ್ಶಿ ಡಾ. ಆರ್. ವಿಶಾಲ್ ತಿಳಿಸಿದರು.

ಬೂವನಹಳ್ಳಿ ವಿಮಾನ ನಿಲ್ದಾಣಕ್ಕೆ ಬುಧವಾರ ಭೇಟಿ ನೀಡಿ ನಂತರ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಆದ್ಯತೆ ಅನುಸಾರ ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಕಾಮಗಾರಿ ಪೂರ್ಣಗೊಳಿಸಲು ಎದುರಾಗಿಸುವ ಸಮಸ್ಯೆಗಳ ನಿವಾರಣೆಗೆ ಒತ್ತು ನೀಡಬೇಕೆಂದರು.

ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ, ಸರ್ವಿಸ್ ರಸ್ತೆ ನಿರ್ಮಾಣ, ರೈತರಿಗೆ ಸಮಸ್ಯೆ ಹಾಗು ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀರಿನ ಸಂಪರ್ಕ ಕಲ್ಪಿಸುವ ಕುರಿತು ಹಾಗೂ ಇನ್ನಿತರ ವಿಷಯಗಳ ಸಂಬಂಧಿತ ಸೂಕ್ತ ನಿರ್ದೇಶನ ನೀಡಿದರು.



ವಶಪಡಿಸಿಕೊಂಡಿರುವ ಜಮೀನುಗಳಲ್ಲಿ ಹಾದು ಹೋಗಿರುವ ಹೈ ಟೆನ್ಷನ್ ವಿದ್ಯುತ್ ಲೈನ್ ಸ್ಥಳಾಂತರಕ್ಕೆ ಅನುದಾನ ಬಿಡುಗಡೆ ಕ್ರಮ ವಹಿಸಲಾಗುವುದು. ನಂತರ ಸರ್ವಿಸ್ ರಸ್ತೆ ನಿರ್ಮಾಣದ ಕುರಿತು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಖುಷ್ಬು ಗೋಯೇಲ್ ಚೌದರಿ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್ ಮತ್ತಿತರರಿದ್ದರು.

## ಯುದ್ಧ ಕಾರ್ಮೋಡ: ಗ್ಯಾಸ್ ಸಿಲಿಂಡರ್ ಪೂರೈಕೆ ವ್ಯತ್ಯಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಜಿಲ್ಲೆಯಲ್ಲೂ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಗೃಹಬಳಕೆ ಹಾಗೂ ವಾಣಿಜ್ಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ನಗರದ ಎಚ್.ಎಸ್. ಪ್ರಕಾಶ್ ರಸ್ತೆಯಲ್ಲಿರುವ ಗ್ಯಾಸ್ ಕಂಪನಿಗೆ ಗೃಹಬಳಕೆ ಸಿಲಿಂಡರ್ ಬುಕ್ ಮಾಡಲು ಸಾರ್ವಜನಿಕರು ನೇರವಾಗಿ ಭೇಟಿ ನೀಡುತ್ತಿರುವುದು ಕಂಡುಬಂದಿದೆ. ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಸ್ಥಗಿತಗೊಂಡಿರುವ ಹಿನ್ನೆಲೆ ಜನರು ಏಜೆನ್ಸಿಗಳಿಗೆ ಬಂದು ಬುಕ್ಕಿಂಗ್ ಮಾಡುತ್ತಿದ್ದಾರೆ. ಆದರೆ ಬುಕ್ ಮಾಡಿದ ಬಳಿಕವೂ ಸುಮಾರು 28 ದಿನಗಳ ನಂತರವೇ ಸಿಲಿಂಡರ್ ದೊರೆಯಬಹುದು ಎಂದು ಏಜೆನ್ಸಿ ಸಿಬ್ಬಂದಿ ತಿಳಿಸುತ್ತಿದ್ದಾರೆ. ಮೊದಲೇ ಬುಕ್ ಮಾಡಿದ ಹಲವರಿಗೆ ಸಹ ಸಿಲಿಂಡರ್ ದೊರೆಯದೇ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದೇ ವೇಳೆ ವಾಣಿಜ್ಯ ಗ್ಯಾಸ್ ಸಿಲಿಂಡರ್ ಕೊರತೆಯೂ ನಗರದಲ್ಲಿನ ಹೋಟೆಲ್ ಹಾಗೂ ಸಿಹಿತಿಂಡಿ ತಯಾರಿಕಾ ಅಂಗಡಿಗಳಿಗೆ ತೀವ್ರ ತೊಂದರೆ ತಂದಿದೆ. ಕೆ.ಆರ್.ಪುರಂನಲ್ಲಿರುವ ಸಿಹಿತಿಂಡಿ ತಯಾರಿಕಾ ಅಂಗಡಿಯಲ್ಲಿ ಪ್ರತಿದಿನ 8 ರಿಂದ 10 ವಾಣಿಜ್ಯ ಸಿಲಿಂಡರ್ ಬಳಸಲಾಗುತ್ತಿತ್ತು. ಆದರೆ ಕಳೆದ ನಾಲ್ಕು ದಿನಗಳಿಂದ ಸಮರ್ಪಕ ಪೂರೈಕೆ ಆಗದೆ ಯುಗಾದಿ ಹಬ್ಬದ ಹಿನ್ನೆಲೆ ತೆಗೆದುಕೊಂಡಿದ್ದ ಹೆಚ್ಚಿನ ಆರ್ಡರ್‌ಗಳನ್ನು ಪೂರ್ಣಗೊಳಿಸಲು ಕಷ್ಟವಾಗುತ್ತಿದೆ ಎಂದು ಮಾಲೀಕರು ತಿಳಿಸಿದ್ದಾರೆ.




ಅದೇ ರೀತಿ ಕೆ.ಆರ್.ಪುರಂನ ಹಲವು ಹೋಟೆಲ್‌ಗಳು ಕೂಡ ಗ್ಯಾಸ್ ಕೊರತೆಯಿಂದ ಸಂಕಷ್ಟ ಎದುರಿಸುತ್ತಿವೆ. ಸಾಮಾನ್ಯವಾಗಿ ದಿನಕ್ಕೆ 7 ರಿಂದ 8 ಸಿಲಿಂಡರ್ ಬಳಸುತ್ತಿದ್ದ ಹೋಟೆಲ್‌ಗಳಿಗೆ ಕಳೆದ ಮೂರು ದಿನಗಳಿಂದ ಕೇವಲ ಎರಡು ವಾಣಿಜ್ಯ ಸಿಲಿಂಡರ್‌ಗಳು ಮಾತ್ರ ಪೂರೈಕೆ ಆಗುತ್ತಿವೆ. ಇದರ ಪರಿಣಾಮವಾಗಿ ಕೆಲ ಹೋಟೆಲ್ ಮಾಲೀಕರು ಹೋಟೆಲ್ ಕಾರ್ಯನಿರ್ವಹಣೆಯ ಸಮಯದಲ್ಲೂ ಬದಲಾವಣೆ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ.

ಗ್ಯಾಸ್ ಸಿಲಿಂಡರ್ ಕೊರತೆಯಿಂದ ಸಾರ್ವಜನಿಕರು ಹಾಗೂ ವ್ಯಾಪಾರಿಗಳು ಪರದಾಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸಮಸ್ಯೆ ಪರಿಹರಿಸಿ ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್ ಪೂರೈಕೆ ಮಾಡುವಂತೆ ಒತ್ತಾಯಿಸಿದ್ದಾರೆ.

## ಗ್ರಾಮ ಠಾಣಾ ಜಾಗ ಕಬಳಿಕೆಗೆ ಯತ್ನ ಆರೋಪ: ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲೂಕಿನ ಬಿಕ್ಕೋಡು ಹೋಬಳಿ ಕೆಸಗೋಡು ಗ್ರಾಮ ಪಂಚಾಯಿತಿಗೆ ಸೇರಿದ ಆಲೂರು-ಬಿಕ್ಕೋಡು ಮುಖ್ಯ ರಸ್ತೆ ಬದಿಯಲ್ಲಿ ಗ್ರಾಮದ ಅಭಿವೃದ್ಧಿಗೆ ಹಲವು ವರ್ಷಗಳಿಂದ ಮೀಸಲಿಟ್ಟಿದ್ದ ಸರ್ಕಾರಿ ಗ್ರಾಮ ಠಾಣಾ ಜಾಗವನ್ನು ಮೇಲ್ಜಾತಿಯ ವ್ಯಕ್ತಿ ನಕಲಿ ದಾಖಲೆ ಸೃಷ್ಟಿಸಿ ಮನೆ ನಿರ್ಮಾಣ ಮಾಡಲು ಯತ್ನಿಸುತ್ತಿದ್ದಾರೆಂದು ಆರೋಪಿಸಿ ಬುಧವಾರ ಕೆಸಗೋಡು, ನೀಲನಹಳ್ಳಿ, ಗೌತಮ ನಗರ, ಮೂಡ್ಲಗಿರಿ ಹಾಗೂ ಹಿರಿವಾಟೆ ಗ್ರಾಮಸ್ಥರು ಹಾಗೂ ದಲಿತ ಮುಖಂಡರು ಪ್ರತಿಭಟನೆ ನಡೆಸಿದರು.

ಕೂಡಲೇ ತೆರವುಗೊಳಿಸಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಹಾಗೂ ನಿವೇಶನ ರಹಿತ ಕುಟುಂಬಗಳಿಗೆ ಮೀಸಲು ಮಾಡಬೇಕೆಂದರು. ಕೆಸಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಸುಮಾರು 15 ಎಕರೆ ಸರ್ಕಾರಿ ಗ್ರಾಮ ಠಾಣಾ ಜಾಗವಿದ್ದು ಸರ್ವೆ ನಡೆಸಿ ವಸತಿ ರಹಿತ ಕುಟುಂಬಗಳಿಗೆ ಹಂಚಿಕೆ ಮಾಡುವಂತೆ ಹಲವು ಬಾರಿ ತಹಶೀಲ್ದಾರ್ ಹಾಗೂ ಗ್ರಾಮ ಪಂಚಾಯಿತಿಗೆ ಮನವಿ ಮಾಡಲಾಗಿತ್ತು. ಆದರೂ ಅಧಿಕಾರಿಗಳು ನಮ ಮನವಿಗೆ ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಭಾಗದಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸ ಮಾಡುತ್ತಿದ್ದು ಅನೇಕ ಮಂದಿಗೆ ನಿವೇಶನ ಇಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ ಅಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ಬಡವರಿಗೆ ನಿವೇಶನ ಒದಗಿಸಬೇಕು ಹಾಗೂ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಜಾಗವನ್ನು ತೆರವುಗೊಳಿಸಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದರು.



ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ.ಎಸ್. ಸತೀಶ್ ಕುಮಾರ್ ಮಾತನಾಡಿ, ಗ್ರಾಮ ಠಾಣಾ ಜಾಗವು ಗ್ರಾಮ ಪಂಚಾಯಿತಿಗೆ ಸೇರಿದೆ. ಯಾವುದೇ ದಾಖಲಾತಿಲ್ಲದೆ ಕಟ್ಟಡ ನಿರ್ಮಾಣ ಮಾಡುವುದು ಕಾನೂನು ಬಾಹಿರವಾಗಿದೆ. ಈ ಸಮಸ್ಯೆಯನ್ನು ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ಗ್ರಾಮ ಠಾಣಾ ಜಾಗವನ್ನು ಸರ್ವೆ ನಡೆಸಿ ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ಮೀಸಲು ಮಾಡುವವರೆಗೂ ಈ ಸ್ಥಳಕ್ಕೆ ಗ್ರಾಮದ ಯಾವುದೇ ವ್ಯಕ್ತಿಗಳು ಅತಿಕ್ರಮ ಪ್ರವೇಶ ಮಾಡದಂತೆ ಇಂದಿನಿಂದ ನಿರ್ಬಂಧಿಸಲಾಗಿದ್ದು ಕಾನೂನು ಬಾಹಿರವಾಗಿ ಚಟುವಟಿಕೆಗಳನ್ನು ಮುಂದುವರೆಸಿದರೆ ಅಂತವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

## ಮಹಿಳಾ ದಿನಾಚರಣೆ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮಹಿಳೆಯರು ಪ್ರತಿ ಕ್ಷೇತ್ರದಲ್ಲೂ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಈ ನಡುವೆ ಕುಟುಂಬವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಮಾತ್ರ ಎಂದಿಗೂ ಮರೆಯಬಾರದು ಎಂದು ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶೆ ಚಂಪಾಶ್ರೀ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಕಾನೂನು ಸೇವೆಗಳ ಸಮಿತಿ ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಾಸವಿ ಕ್ಲಬ್ ಸಹಯೋಗದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸ್ತ್ರೀಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಮುಖ್ಯ ಎಂದರು.




ಅಧಿಕ ಸಿವಿಲ್ ನಾಯಾಧೀಶೆ ಟಿ. ಸುಮ ಮಾತನಾಡಿ, ಮಹಿಳೆಯರಿಗೆ ವಿಫುಲವಾದ ಅವಕಾಶಗಳಿದ್ದು ಅವುಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಸಾಧನೆ ಮಾಡಬೇಕು ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಕೆ. ನಾಗೇಶಮೂರ್ತಿ ಮಾತನಾಡಿ, ಮಹಿಳೆಯರು ಮೊಬೈಲ್ ಗಳನ್ನು ಬಳಕೆ ಮೇಲೆ ನಿಗಾ ವಹಿಸುವುದು ಮುಖ್ಯ ಎಂದರು.

## ಮೃತ ವಿದ್ಯಾರ್ಥಿಗಳ ಕುಟುಂಬಕ್ಕೆ ಪರಿಹಾರಕ್ಕೆ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆ ಸಮೀಪದ ಓಂ ನಗರದಲ್ಲಿ ಕೆರೆಯಲ್ಲಿ ಮುಳುಗಿ ಮೃತಪಟ್ಟ ಇಬ್ಬರು ವಿದ್ಯಾರ್ಥಿಗಳ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಓಂ ನಗರದ ನಿವಾಸಿಗಳಾದ ಮಿಥುನ್ (17) ಹಾಗೂ ಭರತ್ (17) ಮಾ. 7ರಂದು ಜಾನುವಾರು ಮೇಯಿಸಲು ತೆರಳಿದ್ದ ವೇಳೆ ಗ್ರಾಮ ಸಮೀಪದ ಕೆರೆ ಬಳಿ ಕಾಲು ಜಾರಿ ಬಿದ್ದು ಮುಳುಗಿ ಮೃತಪಟ್ಟಿದ್ದರು. ಪಿಯುಸಿ ಓದುತ್ತಿದ್ದ ಮಕ್ಕಳ ಅಗಲಿಕೆಯಿಂದ ಕುಟುಂಬದಲ್ಲಿ ನೀರವ ಮೌನ ಆವರಿಸಿದೆ. ಕುಟುಂಬದ ಭವಿಷ್ಯದ ಆಶಾಕಿರಣವಾಗಿದ್ದ ಇಬ್ಬರ ಸಾವಿನಿಂದ ಅವರ ಕುಟುಂಬಗಳು ಆರ್ಥಿಕ ಹಾಗು ಮಾನಸಿಕ ಸಂಕಷ್ಟಕ್ಕೆ ಸಿಲುಕಿವೆ. ಹೀಗಾಗಿ ಮಾನವೀಯ ದೃಷ್ಟಿಯಿಂದ ಪ್ರಕರಣವನ್ನು ಪರಿಗಣಿಸಿ ಅವರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರ ಮಂಜೂರು ಮಾಡುವಂತೆ ಕೋರಿದ್ದಾರೆ.

## ಆರೋಗ್ಯ ಕ್ಷೇತ್ರದಲ್ಲಿ ಶುಶ್ರೂಷಕರ ಜವಾಬ್ದಾರಿ ಹೆಚ್ಚು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಶುಶ್ರೂಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆಂದು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ. ಬಿ.ರಾಜಣ್ಣ ತಿಳಿಸಿದರು.

ಪಟ್ಟಣದ ಜ್ಞಾನಸಾಗರ ವಿದ್ಯಾಸಂಸ್ಥೆ ಆವರಣದಲ್ಲಿ ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ನಾಗೇಶ್ ಆರೋಗ್ಯ ಮತ್ತು ಅರೆವೈದ್ಯಕೀಯ ವಿಜ್ಞಾನ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಬಿಎಸ್‌ಸಿ ನರ್ಸಿಂಗ್, ಜಿಎನ್‌ಎಂ ಹಾಗೂ ಅರೆ ವೈದ್ಯಕೀಯ ವಿದ್ಯಾರ್ಥಿಗಳ ದೀಪ ಪ್ರಜ್ವಲನ, ಪ್ರತಿಜ್ಞಾ ವಿಧಿ ಸ್ವೀಕಾರ, ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶುಶ್ರೂಷಕರ ಹುದ್ದೆ ಪವಿತ್ರವಾದದ್ದು. ವೈದ್ಯರು ಜೀವ ಉಳಿಸುವ ಕಾರ್ಯ ಮಾಡುವ ಸಂದರ್ಭದಲ್ಲಿ ಶುಶ್ರೂಷಕರು ಉತ್ತಮ ಸಹಾಯಕರಾಗಿ ಕೆಲಸ ಮಾಡಬೇಕಿದೆ. ಶುಶ್ರೂಷಕರಿಗೆ ತಾಯ್ತನ, ಕರುಣೆ, ಮಮತೆ, ಸಹನೆ ಮತ್ತು ತಾಳೆ ಎಲ್ಲವೂ ಇರಬೇಕು. ರೋಗಿಗಳನ್ನು ತಾಳೆಯಿಂದ ಪರಿಶೀಲಿಸಿ ಜೀವ ಉಳಿಸುವ ಕೆಲಸ ಮಾಡಬೇಕು. ವೃತ್ತಿಯಲ್ಲಿ ಮುಖ್ಯವಾಗಿ ನಿಸ್ವಾರ್ಥ ಸೇವೆಯ ಮನೋಭಾವ ಬರಬೇಕಿದೆ. ಶುಶ್ರೂಷಕರ ಶಾಲೆಯ ವಿದ್ಯಾರ್ಥಿಗಳು ನೆಂಟಿಗೇಲ್ ತರಹ ಸೇವೆ ಮಾಡಬೇಕು. ರೋಗಿಯ ಚಿಕಿತ್ಸೆಯಲ್ಲಿ ಅರೆವೈದ್ಯಕೀಯ ಸಿಬ್ಬಂದಿಯೂ ಮುಖ್ಯವೆಂದರು.




ಅಧ್ಯಕ್ಷತೆ ವಹಿಸಿದ್ದ ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಕೆ.ನಾಗೇಶ್ ಮಾತನಾಡಿ, ತರಬೇತಿ ಪಡೆದ ದಾದಿ ಮನುಕುಲಕ್ಕೆ ದೊರೆತ ವರದಾನ. ದಾದಿಯರು ಆರೋಗ್ಯ ಸೇವೆ ಉದ್ಯಮದ ಬೆನ್ನೆಲುಬು. ಅವರ ತ್ವರಿತ ಚಿಂತನೆ ಮತ್ತು ನಿರ್ಣಾಯಕ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದಿಂದ ತುರ್ತು ಸಂದರ್ಭಗಳಲ್ಲಿ ಮುಂಚೂಣಿಯ ಪ್ರತಿಕ್ರಿಯೆಗಳನ್ನು ಒದಗಿಸುವಲ್ಲಿ ಅವರು ನಿರ್ಣಾಯಕರಾಗಿದ್ದಾರೆ. ನರ್ಸ್‌ಗಳು ಸಮಾಜದಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಿದ್ದು, ಮಾನವೀಯತೆಯ ಸಂಕೇತವಾಗಿದ್ದಾರೆ. ವೃತ್ತಿಯಲ್ಲಿ ನಿಷ್ಠೆ ಮತ್ತು ವಿಶ್ವಾಸವನ್ನು ಕಾಪಾಡಿಕೊಂಡು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಭಾರತದಲ್ಲಿ ನರ್ಸಿಂಗ್ ಕ್ಷೇತ್ರವು ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಕಂಡಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಜ್ಞಾನ ಅಗತ್ಯವಾಗಿದೆ. ನರ್ಸ್‌ಗಳು ಜ್ಞಾನ ಹೆಚ್ಚಿಸಿಕೊಳ್ಳಬೇಕು. ಸಮಾಜಕ್ಕೆ ಯಾವ ರೀತಿಯ ಕೊಡುಗೆ ನೀಡುತ್ತೇವೆಂಬುದೇ ಮುಖ್ಯ. ವೈದ್ಯರು ರೋಗಿಗಳಿಗೆ ಚಿಕಿತ್ಸೆನೀಡಬಹುದು. ಆದರೆ, ಮಾನಸಿಕ ಸ್ಥೈರ್ಯ ತುಂಬಿ ರೋಗಿಯನ್ನು ಸಂಪೂರ್ಣ ಗುಣಮುಖ ಮಾಡುವ ಜವಾಬ್ದಾರಿ ಅರೆವೈದ್ಯಕೀಯ ಸಿಬ್ಬಂದಿ ಹೊಂದಿರುತ್ತಾರೆ ಎಂದರು. ಶಿಕ್ಷಣವು ವ್ಯಕ್ತಿಯ ಬದುಕಿಗೆ ಉತ್ತರವಾಗಬೇಕೆ ಹೊರತು ಪ್ರಶ್ನೆಯಾಗಿರಬಾರದು. ಶಿಕ್ಷಣ ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು. ವೃತ್ತಿ ಶಿಕ್ಷಣ ಕೋರ್ಸ್‌ಗಳು ದುಡ್ಡು ಸಂಪಾದನೆಗೆ ಮಾತ್ರ ಸೀಮಿತಗೊಳ್ಳದೆ, ಸಾಧನೆ ಮತ್ತು ಕೊಡುಗೆಗಳನ್ನು ನೀಡುವ ಗುರಿಯೊಂದಿಗೆ ವಿದ್ಯಾರ್ಥಿಗಳನ್ನು ಬೆಳೆಸುತ್ತದೆ ಎಂದರು.

ಪ್ರಸ್ತುತ ದಿನಗಳಲ್ಲಿ ಲಕ್ಷಾಂತರ ದಾದಿಯರ ಅವಶ್ಯಕತೆ ಇದೆ. ವಿದ್ಯಾರ್ಥಿಗಳು ಈ ಕೋರ್ಸ್ ಆಯ್ಕೆ ಮಾಡಿಕೊಂಡಿರುವುದು ಸಂತಸದ ವಿಚಾರ. 2003ರಲ್ಲಿ 50 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಸಂಸ್ಥೆ ಈಗ ಸಾವಿರಾರು ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪವಾಗಿದೆ. ನಾಗೇಶ್ ಶಿಕ್ಷಣ ಸಂಸ್ಥೆ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯಿಂದಲೂ ಉತ್ತೇಜಿಸಿ ಉತ್ತಮ ಶಿಕ್ಷಣ ನೀಡುತ್ತಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ತಾವು ಆಯ್ದುಕೊಂಡಿರುವ ಕ್ಷೇತ್ರದ ಪಾವಿತ್ರ್ಯ ಹಾಗೂ ಜವಾಬ್ದಾರಿ ಅರಿತು ಶಿಕ್ಷಣ ಪೂರ್ಣಗೊಳಿಸಿದರೆ ನಾಡಿಗೆ ಉತ್ತಮ ಹಾಗು ಮಾದರಿ ದಾದಿಯರ ಕೊಡುಗೆಯಾಗುತ್ತದೆ ಎಂದರು.

ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಭಾರತಿ ನಾಗೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನರ್ಸಿಂಗ್ ಕಾಲೇಜ್ ಮಾಜಿ ಪ್ರಾಂಶುಪಾಲೆ ಎ.ಬಿ.ಪುಷ್ಪಲತಾ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ವಾರ್ಷಿಕ ವರದಿಯನ್ನು ಪ್ರಾಂಶುಪಾಲೆ ಆರ್.ಜೆ.ವಿದ್ಯಾರಾಣಿ ಮಂಡಿಸಿದರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಬಿ.ಆರ್.ಯುವರಾಜ್, ಸಂಸ್ಥೆಯ ಡೀನ್ ಡಾ. ಸುಜಾ ಫಿಲಿಪ್, ಆಡಳಿತಾಧಿಕಾರಿ ಫಿಲಿಪ್, ನಿರ್ದೇಶಕರಾದ ಲಕ್ಷ್ಮೀಗೌಡ, ನಾರಾಯಣ್ ಇತರರಿದ್ದರು.

# ಸಿಲಿಂಡರ್ ತತ್ವಾರ ತಪ್ಪಿಸಲು ಅಧಿಕಾರಿಗಳು-ಸರ್ಕಾರಕ್ಕೆ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಹಾಸನ ನಗರದಲ್ಲಿಯೂ ಹಲವು ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದು, ಕೂಡಲೇ ಯುದ್ಧ ನಿಲ್ಲಿಸಬೇಕೆಂದು ಹಲವರು ಸೇರಿ ಜಿಲ್ಲಾಡಳಿದ ಮೂಲಕ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು.

ಅದರಲ್ಲೂ ಕಮರ್ಷಿಯಲ್ ಹಾಗೂ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆಯಿಂದ ಹೋಟೆಲ್ ಮಾಲೀಕರು, ಸಿಹಿತಿಂಡಿ ತಯಾರಕರು ಹಾಗೂ ಸಾರ್ವಜನಿಕರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಮನವರಿಕೆ ಮಾಡಿದರು.



ನಗರದ ಹಲವಾರು ಹೋಟೆಲ್‌ಗಳಲ್ಲಿ ದಿನನಿತ್ಯ ಏಳು ರಿಂದ ಎಂಟು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸುತ್ತಿದ್ದರೆ, ಕಳೆದ ಮೂರು ದಿನಗಳಿಂದ ಕೇವಲ ಎರಡು ಸಿಲಿಂಡರ್‌ಗಳು ಮಾತ್ರ ಪೂರೈಕೆಯಾಗುತ್ತಿವೆ. ಇದರಿಂದಾಗಿ ಹೋಟೆಲ್‌ಗಳು ತಮ್ಮ ಕಾರ್ಯಾವಧಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.

ಕೆ.ಆರ್.ಪುರಂ ಪ್ರದೇಶದಲ್ಲಿರುವ ಗಜಾನನ ಹೋಟೆಲ್‌ನಲ್ಲಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಕೊರತೆಯಿಂದ ಮಾಲೀಕರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಇದೇ ಸಮಸ್ಯೆ ಸಿಹಿತಿಂಡಿ ತಯಾರಿಕಾ ಅಂಗಡಿಗಳಿಗೂ ತಟ್ಟಿದೆ. ದಿನಕ್ಕೆ ಎಂಟರಿಂದ ಹತ್ತು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸುತ್ತಿದ್ದ ಸಿಹಿ ಪದಾರ್ಥ ತಯಾರಿಕಾ ಅಂಗಡಿಗಳಿಗೆ ಕಳೆದ ನಾಲ್ಕು ದಿನಗಳಿಂದ ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್‌ಗಳು ಪೂರೈಕೆಯಾಗುತ್ತಿಲ್ಲ.

ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಹೆಚ್ಚಿನ ಆರ್ಡರ್‌ಗಳನ್ನು ಸ್ವೀಕರಿಸಿದ್ದ ಕೆ.ಆರ್.ಪುರಂನ ನಮ್ಮೂರ ಹೋಳಿಗೆ ಕುರುಕು ತಿಂಡಿ ಅಂಗಡಿಗೆ ಗ್ಯಾಸ್ ಕೊರತೆಯಿಂದ ಹೋಳಿಗೆ ಹಾಗೂ ಇತರ ಸಿಹಿ ತಿನಿಸುಗಳನ್ನು ತಯಾರಿಸಲು ಅಡಚಣೆ ಉಂಟಾಗಿದೆ ಎಂದು ಮಾಲೀಕರು ತಿಳಿಸಿದ್ದಾರೆ ಎಂದರು.

ಇನ್ನೊಂದೆಡೆ ಗೃಹಬಳಕೆ ಸಿಲಿಂಡರ್‌ಗಳ ಕೊರತೆಯೂ ಸಾರ್ವಜನಿಕರನ್ನು ಕಂಗೆಡಿಸಿದೆ. ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಜನರು ನೇರವಾಗಿ ಗ್ಯಾಸ್ ಏಜೆನ್ಸಿಗಳಿಗೆ ತೆರಳಿ ಬುಕ್ಕಿಂಗ್ ಮಾಡುತ್ತಿದ್ದಾರೆ.

ಆದರೆ ಬುಕ್ ಮಾಡಿದ ಬಳಿಕ 28 ದಿನಗಳ ನಂತರ ಮಾತ್ರ ಸಿಲಿಂಡರ್ ದೊರೆಯಲಿದೆ ಎಂದು ಏಜೆನ್ಸಿಯವರು ತಿಳಿಸುತ್ತಿದ್ದಾರೆ.

ನಗರದ ಎಚ್.ಎಸ್. ಪ್ರಕಾಶ್ ರಸ್ತೆಯಲ್ಲಿರುವ ಹಾಸನಾಂಬ ಇಂಡೇನ್ ಗ್ಯಾಸ್ ಏಜೆನ್ಸಿಯಲ್ಲಿ ಮೊದಲೇ ಬುಕ್ಕಿಂಗ್ ಮಾಡಿದ್ದವರಿಗೂ ಸಿಲಿಂಡರ್ ದೊರೆಯದೇ ಜನರು ಪರದಾಡುತ್ತಿದ್ದಾರೆ.

ಗ್ಯಾಸ್ ಸಿಲಿಂಡರ್ ಅಭಾವದಿಂದ ಹೋಟೆಲ್ ವಲಯ ಹಾಗೂ ಸಾರ್ವಜನಿಕ ಜೀವನದ ಮೇಲೂ ಪರಿಣಾಮ ಬೀರುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ತ್ವರಿತವಾಗಿ ಸಮಸ್ಯೆ ಪರಿಹರಿಸಿ ಸಮರ್ಪಕವಾಗಿ ವಾಣಿಜ್ಯ ಮತ್ತು ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳನ್ನು ಪೂರೈಸಬೇಕು ಎಂದು ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಒತ್ತಾಯಿಸಿದರು.

ಈ ವೇಳೆ ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶ ಮೂರ್ತಿ, ರಾಜಶೇಖರ್, ವೇದಾವರಿ, ರೈತ ಹಾಗೂ ಕೆಆರ್ ಎಸ್ ಪಕ್ಷದ ಮುಖಂಡರು ಹಾಜರಿದ್ದರು.

# ಕೋ ಆಪರೇಟಿವ್ ಸೊಸೈಟಿ ಚುನಾವಣೆ ಮಾ.29ಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಕೋ ಆಪರೇಟಿವ್ ಸೊಸೈಟಿ ನಿ. ಹಾಸನ ಈ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆ, ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರ ಆದೇಶದಂತೆ ಮಾ.29 ರಂದು ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಸಂಘದ ಕಚೇರಿ ಆವರಣದಲ್ಲಿ ಚುನಾವಣೆ ನಡೆಯಲಿದ್ದು, ಗೆದ್ದ ತಂಡವು ಮುಂದಿನ 5 ವರ್ಷಗಳ ವರೆಗೆ ಆಡಳಿತ ನಡೆಸಲಿದೆ.

ಚುನಾವಣೆಯು ಪರಿಶಿಷ್ಟ ಜಾತಿ-1, ಪರಿಶಿಷ್ಟ ಪಂಗಡ-1, ಹಿಂದುಳಿದ ವರ್ಗ-2(ಪ್ರವರ್ಗ-ಎ-1 ಮತ್ತು ಪ್ರವರ್ಗ ಬಿ-1) ಸಾಮಾನ್ಯ-11, ಮಹಿಳೆ-2 ಸೇರಿ ಒಟ್ಟು 17 ಸ್ಥಾನಗಳಿಗೆ ಮೀಸಲಿಟ್ಟ ಮತ ಕ್ಷೇತ್ರಗಳಿಗೆ ಚುನಾವಣೆ ನಡೆಸಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಚುನಾವಣಾ ವೇಳಾಪಟ್ಟಿ: ಸ್ಪರ್ಧೆ ಬಯಸುವ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಮಾ.16 ರಿಂದ 21 ರ ವರೆಗೆ ಪ್ರತಿದಿನ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ.

ಮಾ.22 ಬೆಳಗ್ಗೆ 11 ಗಂಟೆಗೆ ಸಂಘದ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ.

ಆ ನಂತರ ಅದೇ ದಿನ ನಾಮಪತ್ರಗಳ ಪರಿಶೀಲನೆ ಬಳಿಕ ಕ್ರಮವಾಗಿರುವ ಅಭ್ಯರ್ಥಿಗಳ ನಾಮಪತ್ರಗಳನ್ನು ಪ್ರಕಟ ಮಾಡಲಿದ್ದಾರೆ.

# ಪುರಸಭೆ ಕಾರ್ಯವೈಖರಿಗೆ ಅಶೋಕ್ ಅಸಮಾಧಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ಕಾರ್ಯವೈಖರಿ, ಮೂಲ ಸೌಕರ್ಯಗಳ ನಿರ್ವಹಣೆ ಹಾಗೂ ರಸ್ತೆ ಅತಿಕ್ರಮಣದ ಸಮಸ್ಯೆ ಬಗ್ಗೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎ.ಆರ್ ಅಶೋಕ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಸಂತೆ ಮೈದಾನ ಹಾಗೂ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ತಮ್ಮ ಅವಧಿಯಲ್ಲಿ ಪುರಸಭೆ ನಿಧಿಯಿಂದ ಹೈಮಾಸ್ಟ್ ಲೈಟ್ ಅಳವಡಿಸಲಾಗಿದ್ದರೂ, ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಲಾಗುತ್ತಿಲ್ಲ ಎಂದು ಆರೋಪಿಸಿದರು.



ಮೂರು ವಾರಗಳ ಹಿಂದೆ ಅಳವಡಿಸಿದ ಹೈಮಾಸ್ಟ್ ಲೈಟ್ ಇನ್ನೂ ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದರಿಂದ ಸಂತೆ ಪ್ರದೇಶದಲ್ಲಿ ರಾತ್ರಿ ವೇಳೆ ವ್ಯಾಪಾರ ನಡೆಸುವವರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ.

ರಾತ್ರಿ 10 ಗಂಟೆವರೆಗೂ ನಡೆಯುವ ಸಂತೆಯಲ್ಲಿ ಬೆಳಕಿನ ಕೊರತೆ ಕಂಡು ಬರುತ್ತಿರುವುದು ದುರಂತಕರ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ನಿಧಿಯಿಂದ ಜನರ ಅನುಕೂಲಕ್ಕಾಗಿ ಕಾಮಗಾರಿ ಮಾಡಲಾಗುತ್ತದೆ.

ಆದರೆ ಅದಕ್ಕೆ ಸರಿಯಾದ ನಿರ್ವಹಣೆ ಮಾಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ಪಟ್ಟಣದ ಹಲವು ವಾರ್ಡ್‌ಗಳಲ್ಲಿ ಲೈಟ್ ವ್ಯವಸ್ಥೆ ಇದ್ದರೂ ನಿರ್ವಹಣೆ ಕೊರತೆಯಿಂದ ಅನೇಕ ಕಡೆ ಲೈಟ್‌ಗಳು ಕಣ್ಮುಚ್ಚಿ ಕತ್ತಲೆ ಆವರಿಸಿದೆ ಎಂದು ದೂರಿದರು. ಅಧಿಕಾರಿಗಳು ವಾರ್ಡ್‌ಗಳಿಗೆ ಭೇಟಿ ನೀಡಿ ಲೈಟ್‌ಗಳ ದುರಸ್ತಿ ಹಾಗೂ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದರ ಜೊತೆಗೆ ಪಟ್ಟಣದಲ್ಲಿ ಸ್ವಚ್ಛತಾ ಕಾರ್ಯಗಳ ಬಗ್ಗೆ ಕೂಡ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸ್ವಚ್ಛತಾ ಸಿಬ್ಬಂದಿ ಮುಂಜಾನೆ ಕೆಲಸ ಪ್ರಾರಂಭಿಸಿ ಶ್ರಮಿಸುತ್ತಿದ್ದರೂ, ಅವರಿಗೆ ಸರಿಯಾದ ಮೇಲ್ವಿಚಾರಣೆ ಇಲ್ಲದ ಕಾರಣ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಕೆಲವು ಕಡೆ ಕಸವನ್ನು ಗುಡ್ಡೆ ಮಾಡಿ ಬಿಟ್ಟು ಹೋಗುತ್ತಿರುವುದು ಕಂಡು ಬರುತ್ತಿದೆ.

ಇದರಿಂದ ಪಟ್ಟಣದ ಸ್ವಚ್ಛತೆಗೆ ಧಕ್ಕೆಯಾಗುತ್ತಿದೆ. ಸ್ವಚ್ಛತಾ ಕಾರ್ಯಗಳಿಗೆ ಸೂಕ್ತ ಮೇಲ್ವಿಚಾರಣೆ ನೀಡಿದರೆ ಉತ್ತಮ ಫಲಿತಾಂಶ ದೊರೆಯಬಹುದು ಎಂದು ಅಭಿಪ್ರಾಯಪಟ್ಟರು.

ಇನ್ನೊಂದೆಡೆ ಪಟ್ಟಣದಲ್ಲಿ ರಸ್ತೆ ಅತಿಕ್ರಮಣ ಸಮಸ್ಯೆಯೂ ಗಂಭೀರವಾಗುತ್ತಿದೆ ಎಂದ ಅವರು, ಕೆಲ ಬೀದಿ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ರಸ್ತೆಯ ಮಧ್ಯ ಭಾಗದವರೆಗೆ ವಿಸ್ತರಿಸಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ ಎಂದು ದೂರಿದರು.

ಅಂಗಡಿಗಳ ಹಿಂದೆ ಸಾಕಷ್ಟು ಜಾಗ ಇದ್ದರೂ ರಸ್ತೆ ಕಡೆಗೆ ಬಂದು ವ್ಯಾಪಾರ ನಡೆಸುತ್ತಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಪಟ್ಟಣದಲ್ಲಿ ಜಾತ್ರಾ ಮಹೋತ್ಸವ ನಡೆಯುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದ್ದು, ರಸ್ತೆ ಅತಿಕ್ರಮಣವನ್ನು ತಕ್ಷಣ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ರಸ್ತೆ ಬದಿಯಲ್ಲಿ ಅನಧಿಕೃತವಾಗಿ ಹಾಕಿರುವ ಅಂಗಡಿಗಳನ್ನು ಹಿಂದಕ್ಕೆ ಸರಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

# ಮಹಿಳಾ ದಿನಾಚರಣೆ- ಸಾಧಕ ಸ್ತ್ರೀಯರಿಗೆ ಸನ್ಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು:ಮಹಿಳಾ ಒಕ್ಕಲಿಗರ ಸಂಘ ಹಾಗೂ ಸ್ಫೂರ್ತಿ ಮಹಿಳಾ ಒಕ್ಕಲಿಗರ ಸಂಘ, ಗೆಂಡೇಹಳ್ಳಿ ಇವರ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪಟ್ಟಣದ ಮಂಜುನಾಥ ಕಲ್ಯಾಣ ಮಂಟಪದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ ಅವರು, ಸಮಾಜದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.



ಯಾವುದೇ ಪುರುಷ ಅತ್ಯುತ್ತಮ ಸಾಧನೆ ಮಾಡುವಾಗ ಅವರ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ. ಅದೇ ರೀತಿ ಮಹಿಳೆ ಸಾಧನೆ ಮಾಡುವಾಗ ಅವರ ಹಿಂದೆ ಪುರುಷರ ಸಹಕಾರವೂ ಇರುತ್ತದೆ ಎಂಬುದು ನಿಜವಾದ ಸಂಗತಿ ಎಂದು ಹೇಳಿದರು.

ದೇಶದಲ್ಲಿ ಅನೇಕ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿರುವುದನ್ನು ನಾವು ನೆನೆಯುತ್ತೇವೆ. ಆ ಸಾಧನೆಗಳನ್ನು ಕೇವಲ ನೆನಪಿಸಿಕೊಳ್ಳುವುದಷ್ಟೇ ಅಲ್ಲದೆ, ಅವುಗಳಿಂದ ಪ್ರೇರಣೆ ಪಡೆದು ಜೀವನದಲ್ಲಿ ಅನುಸರಿಸಿ ಸುಖ ಸಂಸಾರದಲ್ಲಿ ಮುನ್ನಡೆಯಬೇಕು ಎಂಬುದನ್ನು ಮಹಿಳಾ ದಿನಾಚರಣೆ ನಮಗೆ ಕಲಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಇಂಪಾ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸ್ವಾವಲಂಬಿ ಜೀವನ ಕಟ್ಟಿಕೊಂಡು ಸಮಾಜದಲ್ಲಿ ಉತ್ತಮ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಹೇಳಿದರು. ಹೈನುಗಾರಿಕೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ವಿಶೇಷ ಸಾಧನೆ ಮಾಡುತ್ತಿರುವುದು ಗಮನಾರ್ಹ. ಎಲ್ಲ ರಂಗಗಳಲ್ಲಿಯೂ ಮಹಿಳೆಯರು ತಮ್ಮ ಸಾಮರ್ಥ್ಯ ತೋರಿಸಿ ಯಶಸ್ಸು ಸಾಧಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ನೀಡಿದ್ದು, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಅಭಿವೃದ್ಧಿಯತ್ತ ಸಾಗಬೇಕು ಎಂದು ತಿಳಿಸಿದರು.

ಸ್ಫೂರ್ತಿ ಮಹಿಳಾ ಸಂಘದ ಅಧ್ಯಕ್ಷೆ ಸುಧಾ ಮಾತನಾಡಿ, ಮಹಿಳೆಯರು ಸಂಘಟಿತರಾಗಿ ಕಾರ್ಯನಿರ್ವಹಿಸಿ ಸಮಾಜದಲ್ಲಿ ಉತ್ತಮ ಬದಲಾವಣೆ ತರಲು ಸಾಧ್ಯವಿದೆ ಎಂದು ಹೇಳಿದರು.

ಮಹಿಳೆಯರು ಶಿಕ್ಷಣ ಹಾಗೂ ಸ್ವಾವಲಂಬನೆ ಮೂಲಕ ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳಬೇಕು ಎಂದು ತಿಳಿಸಿದರು.

ಅಲ್ಲದೆ ಪುರುಷ ಪ್ರಧಾನವಾಗಿರುವಂತಹ ರಾಜ್ಯ ಒಕ್ಕಲಿಗ ಸಂಘದಲ್ಲಿ ಮುಂದಿನ ದಿನಗಳಲ್ಲಿ ಮಹಿಳೆಯರಿಗೂ ಸಹ ಸ್ಥಾನಮಾನ ನೀಡುವ ಕೆಲಸ ಆಗಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿದರು

ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷೆ ಭಾರತೀಗೌಡ ಮಾತನಾಡಿ, ಮಹಿಳೆಯರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು. ಮಹಿಳೆಯರು ಆತ್ಮವಿಶ್ವಾಸದಿಂದ ಮುಂದುವರಿದರೆ ಇನ್ನಷ್ಟು ಸಾಧನೆ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

# ಜಾಯಿಕಾಯಿ ಗಿಡಗಳ ವಿತರಣೆಗೆ ರೈತರಿಂದ ಉತ್ತಮ ಪ್ರತಿಕ್ರಿಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆಯಡಿ ವೈವಿಧ್ಯಮಯ ಬೆಳೆ ಪದ್ಧತಿ ಮತ್ತು ರೈತರ ಆದಾಯ ಹೆಚ್ಚಿಸಿಕೊಳ್ಳಲು ಜಾಯಿಕಾಯಿ ಗಿಡಗಳ ವಿತರಣೆಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್ ಕುಮಾರ್ ಯು.ಎಂ ತಿಳಿಸಿದರು. 2025-26 ನೇ ಸಾಲಿನ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆ ತಾಲ್ಲೂಕಿನ ಬ್ಯಾಕರವಳ್ಳಿ ಮತ್ತು ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಎಲ್ಲಾ ರೈತರಿಗಗೂ ಒಂದು ವರದಾನವಾಗಿದೆ ಎಂದರು.



ಯೋಜನೆಯಡಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಒಳಗೊಂಡಂತೆ ಎಲ್ಲಾ ವರ್ಗದ ರೈತ ಫಲಾನುಭವಿಗಳಿಗೂ ಸಮಾನವಾಗಿ, ಶೇ.50ರ ಸರ್ಕಾರದ ಸಹಾಯಧನವಾಗಿ ತಲಾ ಗರಿಷ್ಠ ಒಟ್ಟು 30 ಸಾವಿರ ಸರ್ಕಾರದ ಸಹಾಯಧನ, ಹಸು ಅಥವಾ ಎಮ್ಮೆ ಅಥವಾ ಮೇಕೆ ಖರೀದಿಗೆ ಅಥವಾ ಇತರೆ ಘಟಕ ಅಳವಡಿಸಿಕೊಳ್ಳಲು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಅನುದಾನ ನೀಡಲಾಗುವುದು ಎಂದರು.

ಜೊತೆಗೆ ಕೃಷಿ ವೈವಿಧ್ಯತೆಗೆ ಪೂರಕವಾಗಿ ತೋಟಗಾರಿಕಾ ಬೆಳೆಗಳಾದ ಜಾಯಿಕಾಯಿ, ಕರಿ ಮೆಣಸು, ಚೆಕ್ಕೆ ಲವಂಗ ಮತ್ತು ಇನ್ನಿತರೆ ಲಾಭದಾಯಕ ತೋಟಗಾರಿಕಾ ಬೆಳೆಗಳನ್ನು ಸಕಲೇಶಪುರ ಭಾಗದ ರೈತರು ವೈವಿಧ್ಯಮಯ ಬೆಳೆ ಪದ್ಧತಿಯನ್ನು ಹೆಚ್ಚಿಸಿ ತಲಾ ನಿವ್ವಳ ಆದಾಯ ಹೆಚ್ಚಿಸಿಕೊಳ್ಳಲು ಈ ಯೋಜನೆ ತಾಲೂಕಿನಲ್ಲಿ ಅನುಷ್ಠಾನದಲ್ಲಿದೆ ಎಂದು ಪ್ರಕಾಶ್ ಕುಮಾರ್ ಮಾಹಿತಿ ತಿಳಿಸಿಕೊಟ್ಟರು.

ಕೆಲವು ದಿನಗಳ ಹಿಂದೆ ಆತ್ಮ ಯೋಜನೆಯಡಿ ತಾಲ್ಲೂಕಿನ ಪ್ರತೀ ಹೋಬಳಿಯ 5 ರೈತರಿಗೆ ಸುಮಾರು 6000 ಸರ್ಕಾರದ ಸಹಾಯಧನದಡಿ 15 ಹೆಣ್ಣು ಮತ್ತು ಒಂದು ಗಂಡು ಸಂತತಿಯ ಆಯ್ದ ಗ್ರಾಫ್ಟಿಂಗ್ ಜಾಯಿಕಾಯಿ ತಳಿಗಳನ್ನು, ವಿತರಿಸಿದ್ದು, ಇದರಂತೆ ವಿಶೇಷ ಯೋಜನೆಯ ಗ್ರಾಮ ಪಂಚಾಯತಿ ವ್ಯಾಪ್ತಿಗೆ, ಜಾಯಿಕಾಯಿ ಗಿಡಗಳ ಖರೀದಿಗೆ ಸರ್ಕಾರದ ಸಹಾಯಧನ ವಿತರಿಸಿ ರೈತರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸವಲತ್ತು ವಿತರಣಾ ಕಾರ್ಯಕ್ರಮ ಆಯೋಜಿಸಿದರು.

# ಕಾಯಂ ಸಾಗುವಳಿ ಚೀಟಿ ವಿತರಿಸಲು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡಲು ಸ್ಥಳೀಯ ಶಾಸಕರು ಅಧಿಕಾರಿಗಳು ಮತ್ತು ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ರೈತ ಸಂಘ ಜಿಲ್ಲಾಧ್ಯಕ್ಷ ನಟರಾಜ್ ಒತ್ತಾಯಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಎಂ.ಶಿವಲಿಂಗೇಗೌಡರು, ಕಳೆದ ನಾಲ್ಕು ಅವಧಿಯಿಂದ ಶಾಸಕರಾಗಿದ್ದಾರೆ.

ಸಾಗುವಳಿ ಚೀಟಿ ಎಷ್ಟು ವಿತರಿಸಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆ ಆಗುತ್ತಿದೆ. ಶಾಸಕರು ಬಗರ್ ಹುಕುಂ ಸಮಿತಿ ಅಧ್ಯಕ್ಷರೂ ಆಗಿದ್ದಾರೆ. ಮೂಲಗಳ ಪ್ರಕಾರ ಬಹಳ ಕಡಿಮ ಸಾಗುವಳಿ ಚೀಟಿ ವಿತರಣೆ ಮಾಡಿರುವುದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ ಎಂದು ದೂರಿದರು.



ಆಡಳಿತ ಪಕ್ಷದ ಶಾಸಕರಾಗಿರುವ ಶಿವಲಿಂಗೇಗೌಡರು ಕೂಡಲೇ ಬಗರ್ ಹುಕುಂ ಸಮಿತಿ ಸಭೆ ಕರೆದು ಯಾರೆಲ್ಲ ರೈತರ ಅರ್ಜಿ ವಜಾ ಆಗಿದ್ದಾವೋ ಅವರಿಗೆ ಕೂಡಲೇ ಕಾಯಂ ಮಂಜೂರಾತಿ ಕೊಡಿಸಬೇಕು ಎಂದು ಒತ್ತಾಯಿಸಿದರು.

ಕೆಲವು ರೈತರು ಹಂಗಾಮಿ ಸಾಗುವಳಿ ಚೀಟಿ ಪಡೆದಿದ್ದಾರೆ, ಅವರು ಕಾಯಂ ಸಾಗುವಳಿ ಚೀಟಿ ಏಕೆ ಪಡೆಯಲಾಗಿಲ್ಲ ಎಂಬುದನ್ನು ಸ್ಪಷ್ಟ ಪಡಿಸಬೇಕು. ರೈತರು ಸಾಗವಳಿ ಚೀಟಿ ಬೇಕೆಂದು ಸರ್ಕಾರದ ಮೊರೆ ಹೋಗುತ್ತಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದುಆರೋಪಿಸಿದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-12

538 ಆಸ್ಟ್ರೋಗೋತ್‌ಗಳ ರಾಜ ವಿಟಿಜಸ್, ರೋಮ್‌ನ ಮುತ್ತಿಗೆಯನ್ನು ಕೊನೆಗೊಳಿಸಿ, ರಾವೆನ್ನಾಗೆ ಹಿಮ್ಮೆಟ್ಟುತ್ತಾನೆ, ನಗರವನ್ನು ವಿಜಯಶಾಲಿ ಬೈಜಾಂಟೈನ್ ಜನರಲ್ ಬೆಲಿಸಾರಿಯಸ್‌ನ ಕೈಯಲ್ಲಿ ಬಿಡುತ್ತಾನೆ.

1455 ಜೋಹಾನ್ಸ್ ಗುಟೆನ್‌ಬರ್ಗ್ ಅವರ ಬೈಬಲ್‌ನ ಮೊದಲ ದಾಖಲೆ , ಈ ದಿನದ ದಿನಾಂಕವನ್ನು ಹೊಂದಿರುವ ಎನಿಯಾ ಸಿಲ್ವಿಯೊ ಪಿಕ್ಕೊಲೊಮಿನಿ ಬರೆದ ಪತ್ರವು ಒಂದು ವರ್ಷದ ಹಿಂದೆ ಮುದ್ರಿಸಲಾದ ಬೈಬಲ್ ಅನ್ನು ಉಲ್ಲೇಖಿಸುತ್ತದೆ.

1918 ರಲ್ಲಿ ವಿದೇಶಿ ಆಕ್ರಮಣಕ್ಕೆ ಹೆದರಿ, ವ್ಲಾಡಿಮಿರ್ ಲೆನಿನ್ ಕ್ರಾಂತಿಕಾರಿ ರಷ್ಯಾದ ರಾಜಧಾನಿಯನ್ನು ಪೆಟ್ರೋಗ್ರಾಡ್ (ಸೇಂಟ್ ಪೀಟರ್ಸ್ಬರ್ಗ್) ನಿಂದ ಮಾಸ್ಕೋಗೆ ಸ್ಥಳಾಂತರಿಸಿದರು.

ಬ್ರಿಟಿಷ್ ಉಪ್ಪಿನ ಕಾನೂನುಗಳನ್ನು ರದ್ದುಗೊಳಿಸಲು ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಮಹಾತ್ಮ ಗಾಂಧಿಯವರುಉಪ್ಪು ಮಾರ್ಚ್

1930 ಮಹಾತ್ಮಾ ಗಾಂಧಿಯವರು ವ್ಯಾಪಕವಾಗಿ ದ್ವೇಷಿಸಲ್ಪಟ್ಟ ಬ್ರಿಟಿಷ್ ಉಪ್ಪಿನ ತೆರಿಗೆಯ ವಿರುದ್ಧ ತಮ್ಮ ಪ್ರಸಿದ್ಧ ೨೦೦ ಮೈಲಿ (೩೨೦ ಕಿಮೀ) ಪ್ರತಿಭಟನಾ ಮೆರವಣಿಗೆಯನ್ನು ಪ್ರಾರಂಭಿಸಿದರು.

1994 ರಲ್ಲಿ ಇಂಗ್ಲೆಂಡ್ ಚರ್ಚ್ ತನ್ನ ಮೊದಲ ೩೨ ಮಹಿಳಾ ಪುರೋಹಿತರನ್ನು ಇಂಗ್ಲೆಂಡ್‌ನ ಬ್ರಿಸ್ಟಲ್‌ನಲ್ಲಿರುವ ಬ್ರಿಸ್ಟಲ್ ಕ್ಯಾಥೆಡ್ರಲ್‌ನಲ್ಲಿ ನೇಮಿಸಿತು\1968 ನಟಿ ಮೌರೀನ್ ಒ'ಹಾರಾ (47) ವಿಮಾನ ಚಾಲಕ ಚಾರ್ಲ್ಸ್ ಎಫ್. ಬ್ಲೇರ್ ಜೂನಿಯರ್ (58) ಅವರನ್ನು ಮೂರನೇ ಪತಿಯಾಗಿ ವಿವಾಹವಾದರು.

1969: ಬೀಟಲ್ ಪಾಲ್ ಮೆಕ್ಕರ್ಟ್ನಿ (26) ಲಂಡನ್ನಿನ ಮೇರಿಲೆಬೋನ್ ರಿಜಿಸ್ಟರ್ ಕಚೇರಿಯಲ್ಲಿ ಅಮೇರಿಕನ್ ಛಾಯಾಗ್ರಾಹಕ ಲಿಂಡಾ ಈಸ್ಟ್ಮನ್ (27) ಅವರನ್ನು ವಿವಾಹವಾದರು.

1970 ಕೆನಡಿಯನ್-ಅಮೇರಿಕನ್ ಕಲಾ ವಿದ್ಯಾರ್ಥಿ ಮತ್ತು ಭವಿಷ್ಯದ ನಟ ಫಿಲ್ ಹಾರ್ಟ್‌ಮನ್ (21) ಮೊದಲ ಪತ್ನಿ ಗ್ರೆಚೆನ್ ಲೂಯಿಸ್‌ರನ್ನು ವಿವಾಹವಾದರು; 1972 ರಲ್ಲಿ ವಿಚ್ಛೇದನ.

# ಬೇಸಿಗೆಯಲ್ಲಿ ಹಸಿರೆಲೆ ತರಕಾರಿಗಳು ಬೇಗನೇ ಒಣಗಿ ಹಾಳಾಗುತ್ತಿದೆಯಾ?

ಬೇಸಿಗೆಯಲ್ಲಿ ತರಕಾರಿಗಳನ್ನು ಶೇಖರಿಸಿಡುವುದು ಸ್ವಲ್ಪ ಕಷ್ಟ! ಯಾಕೆಂದ್ರೆ ತರಕಾರಿಗಳನ್ನು ಫ್ರಿಡ್ಜ್‌ನಲ್ಲಿ ಶೇಖರಿಸಿಟ್ಟರೂ ಕೂಡ, ಹಸಿರೆಲೆ ತರಕಾರಗಳು, ಫ್ರೆಶ್ ಆಗಿರದೆ, ಅಲ್ಲಿಗೆಯೇ ಬಾಡಿ ಹೋಗುತ್ತವೆ. ಹೀಗಾಗಿ ಬೇಸಿಗೆಯ ಸಮಯದಲ್ಲಿ ಮಾರ್ಕೆಟ್ ನಿಂದ ತಂದಿರುವ ತರಕಾರಿ ಗಳನ್ನು ಸರಿಯಾದ ವಿಧಾನದಲ್ಲಿ ಶೇಖರಿಸಿಟ್ಟರೆ ಮಾತ್ರ ಎರಡು ಮೂರು ದಿನಗಳ ಕಾಲ ತಾಜಾವಾಗಿರುತ್ತವೆ

ದಿನಾ ಹೋದ ಹಾಗೆ ಉರಿ ಬಿಸಿಲಿನ ಬೇಗೆ ತೀವ್ರವಾಗಿ ಹೆಚ್ಚಾಗುತ್ತಿದ್ದು ತರಕಾರಿಗಳ ದರದಲ್ಲಿಯೂ ಕೂಡ ಏರಿಳಿತ ಶುರುವಾಗಿದೆ. ಕೆಲಮೊಂದು ತರಕಾರಿಗಳ ಬೆಲೆ ಈಗಾಗಲೇ ಗಗನಕ್ಕೆ ಏರಿದೆ.

ಅದರಲ್ಲೂ ಬೇಸಿಗೆಯಲ್ಲಿ ನೀರಿನಾಂಶ ಹೆಚ್ಚಿರುವ ಹಣ್ಣು ತರಕಾರಿಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ, ಇಂತಹ ಹಣ್ಣು ತರಕಾರಿಗಳ ಬೆಲೆಯೂ ಕೂಡ ಏರಿಳಿತ ಆಗುತ್ತಲೇ ಇರುತ್ತವೆ. ಹಾಗಾಗಿ ನಮ್ಮಲ್ಲಿ ಹೆಚ್ಚಿನವರ ಎರಡು ಮೂರು ದಿನಕ್ಕೆ ಆಗುವಷ್ಟು ಒಂದು ವಾರಕ್ಕೆ ಸಾಕಾಗುವಷ್ಟು ತರಕಾರಿಗಳನ್ನು ಖರೀದಿಸಿ, ಮನೆಯಲ್ಲಿ ಶೇಖರಿಸಿಟ್ಟುಕೊಳ್ಳುತ್ತಾರೆ. ಆದರೆ ಬೇಸಿಗೆಯ ಬಿಸಿಲಿನ ಝುಳಕ್ಕೆ ತಂದಿರುವ ತರಕಾರಿಗಳು ಬೇಗನೇ ಕಾಳಾಗಿಬಿಡುತ್ತವೆ.

ಸಾಮಾನ್ಯವಾಗಿ ಬೇಸಿಗೆಯಲ್ಲಿ ತರಕಾರಿಗಳು ಬೇಗನೆ ಹಾಳಾಗುವುದು ದೊಡ್ಡ ಸಮಸ್ಯೆ. ರೆಫ್ರಿಜರೇಟರ್‌ನಲ್ಲಿಟ್ಟಿದ್ದರೂ, ಟೊಮೆಟೊಗಳು ಮೃದುವಾಗುತ್ತವೆ ಅಥವಾ ಈ ಹಣ್ಣಿನ ಮೇಲ್ಮೈ ಸಿಪ್ಪೆ ಸುಕ್ಕುಗಟ್ಟಿದಂತೆ ಆಗುವುದು, ಹಸಿರೆಲೆ ತರ ಕಾರಗಳು ಅಲ್ಲಿಗೆಯೇ ಬಾಡಿ ಹೋಗುವುದು



ಬೆಂಡೆಕಾಯಿ ಮತ್ತು ಕುಂಬಳಕಾಯಿ ಕಪ್ಪು ಬಣ್ಣಕ್ಕೆ ತಿರುಗುತ್ತವೆ, ಮೆಣಸಿನಕಾಯಿ ಸೌತೆಕಾಯಿ, ನಿಂಬೆಹಣ್ಣು, ಇಟ್ಟಲ್ಲಿಯೇ ಕೊಳೆಯುವುದು. ಯಾಕೆಂದ್ರೆ ಬಿಸಿಲಿನ ತೀವ್ರವಾದ ಶಾಖ ಮತ್ತು ತೇವಾಂಶದಿಂದಾಗಿ, ತರಕಾರಿಗಳಲ್ಲಿ ಬ್ಯಾಕ್ಟೀರಿಯಾಗಳು ಬೇಗನೆ ಬೆಳೆಯುತ್ತವೆ, ಇದರಿಂದಾಗಿ ಅವು ಕೊಳೆಯುತ್ತವೆ, ಇದರಿಂದ ಅನಾವಶ್ಯಕ ಹಣ ವ್ಯರ್ಥವಾಗುವುದರ ಜೊತೆಗೆ ಮನಸ್ಸಿಗೆ ಬೇಜಾರಾಗಿಬಿಡುತ್ತದೆ.

ಹೀಗಾಗಿ ಈ ಸಮಸ್ಯೆ ಯನ್ನು ತಪ್ಪಿಸಲು,ಕೆಲಮೊಂದು ಸರಳ ಟ್ರಿಕ್ಸ್ ಅನ್ನು ಅನು ಸರಿಸಿಕೊಂಡು ಹೋದರೆ, ತರಕಾರಿಗಳನ್ನು ದೀರ್ಘಕಾಲದವರೆಗೆ ತಾಜಾವಾಗಿ ಡಲು ಸಹಾಯವಾಗುತ್ತದೆ.

ತರಕಾರಿಗಳನ್ನು ಕತ್ತರಿಸಿ ಬಿಸಿಲಿನಲ್ಲಿ ಒಣಗಿಸುವುದರಿಂದ ಬ್ಯಾಕ್ಟೀರಿಯಾಗಳಿಂದ ರಕ್ಷಿಸಬಹುದು. ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ತರಕಾರಿಗಳು ಆರೋಗ್ಯಕರವಾಗುವುದಲ್ಲದೆ ರುಚಿಕರವೂ ಆಗುತ್ತವೆ.

ತರಕಾರಿಗಳನ್ನು ಬಿಸಿಲಿನಲ್ಲಿ ಸ್ವಲ್ಪ ಹೊತ್ತು ಒಣಗಿಸುವುದರಿಂದ ತರಕಾರಿಗಳಲ್ಲ ರುವ ನೀರಿನಾಂಶ ಕಡಿಮೆಯಾಗಿ ಅವುಗಳ ರುಚಿ ಹೆಚ್ಚಾಗುತ್ತದೆ. ತರಕಾರಿಗಳನ್ನು ತಾಜಾವಾಗಿಡಲು, ಗ್ಯಾಸ್ ಉರಿ ಇರುವ ಕಡೆ ಅಥವಾ ನೇರ ಸೂರ್ಯನ ಬೆಳಕು ಬೀಳುವ ಕಡೆ ಶೇಖರಿಸಿಡಬೇಡಿ

ಹಸಿರು ಎಲೆಗಳ ತರಕಾರಿಗಳು ಹಾಳಾಗುವ ಸಾಧ್ಯತೆ ಹೆಚ್ಚು. ಅವುಗಳನ್ನು ಹೆಚ್ಚು ಕಾಲ ತಾಜಾವಾಗಿಡಲು ಮತ್ತು ಹಾಳಾಗದಂತೆ ತಡೆಯಲು, ಅವುಗಳನ್ನು ಸ್ವಚ್ಛ ಗೊಳಿಸಿ ಮತ್ತು ಕೊಳೆತ ಎಲೆಗಳನ್ನು ಅವುಗಳಿಂದ ಬೇರ್ಪಡಿಸಿ.

ತರಕಾರಿಗಳನ್ನು ತಾಜಾವಾಗಿಡಲು, ಮೊದಲು ಅವುಗಳನ್ನು ಕತ್ತರಿಸಿ ಸ್ವಲ್ಪ ಒಣಗಿಸಿ. ತರಕಾರಿಗಳನ್ನು ಪ್ರತ್ಯೇಕ ಚೀಲಗಳಲ್ಲಿ ಸಂಗ್ರಹಿಸಿ. ರೆಫ್ರಿಜರೇಟರ್‌ನಲ್ಲಿ ಇಡದಿದ್ದರೂ ಸಹ ಅವು ಬೇಗನೆ ಹಾಳಾಗುವುದನ್ನು ಇದು ತಡೆಯುತ್ತದೆ. ಅಲ್ಲದೆ, ತರಕಾರಿಗಳನ್ನು ಒಂದರ ಮೇಲೊಂದು ಬುಟ್ಟಿಯಲ್ಲಿ ಜೋಡಿಸಬೇಡಿ.

ಟೊಮೆಟೊ ದಿನನಿತ್ಯದ ಅಡುಗೆಗೆ ಬೇಕೇಬೇಕಾಗುತ್ತದೆ. ಹೀಗಾಗಿ ಟೊಮೆಟೊ ಗಳನ್ನು ತಾಜಾವಾಗಿಡಲು, ಅವುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಇರಿಸಿ ಮತ್ತು ಚೀಲದಲ್ಲಿ ಸಣ್ಣ ರಂಧ್ರಗಳನ್ನು ಮಾಡಿ. ಟೊಮೆಟೊಗಳು ಅತ್ಯಂತ ಬೇಗನೆ ಹಾಳಾಗುವ ತರಕಾರಿ.

ಅವು ಬೇಗನೆ ಹಾಳಾಗದಂತೆ ತಡೆಯಲು, ನಾವು ಸಾಮಾನ್ಯವಾಗಿ ಅವುಗಳನ್ನು ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸುತ್ತೇವೆ, ಆದರೆ ಆಗಲೂ, ಅವು ರೆಫ್ರಿಜರೇಟರ್‌ನಲ್ಲಿ ಕೆಲವು ದಿನಗಳ ನಂತರ ಹಾಳಾಗಲು ಪ್ರಾರಂಭಿಸುತ್ತವೆ.

ಟೊಮೆಟೊಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಲು, ಅವುಗಳನ್ನು ಹೋಳು ಗಳಾಗಿ ಕತ್ತರಿಸಿ ಹುರಿಯಿರಿ. ಹುರಿದ ಟೊಮೆಟೊಗಳನ್ನು ಆಲಿವ್ ಎಣ್ಣೆಯಿಂದ ಪಾತ್ರೆಯಲ್ಲಿ ಸಂಗ್ರಹಿಸಿ.

ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಈರುಳ್ಳಿಯಂತಹ ತರಕಾರಿಗಳನ್ನು ದೀರ್ಘ ಕಾಲದವರೆಗೆ ತಾಜಾವಾಗಿಡಲು, ಅವುಗಳನ್ನು ತಂಪಾದ ಸ್ಥಳದಲ್ಲಿ ಸಂಗ್ರಹಿಸಿ. ಬೆಳ್ಳುಳ್ಳಿ ಸರಿಯಾಗಿ ಗಾಳಿ ಬರಲು ಬಿಡಿ ಮತ್ತು ಅದನ್ನು ಸೆಣಬಿನ ಚೀಲದಲ್ಲಿ ನೇತುಹಾಕಿ.

ಇದು ಬೆಳ್ಳುಳ್ಳಿಯನ್ನು ಹೆಚ್ಚು ಕಾಲ ತಾಜಾವಾಗಿರಿಸುತ್ತದೆ. ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಎಂದಿಗೂ ಒಟ್ಟಿಗೆ ಸಂಗ್ರಹಿಸಬೇಡಿ. ಅವುಗಳನ್ನು ಸೂರ್ಯನ ಬೆಳಕಿನಿಂದ ದೂರವಿಡಿ. ಇದು ಮೊಳಕೆಯೊಡೆಯುವುದನ್ನು ತಡೆಯುತ್ತದೆ. ಇದು ಈರುಳ್ಳಿ ಹೆಚ್ಚು ಸಮಯದವರೆಗೆ ಹಾಳಾಗದಂತೆ ನೋಡಿಕೊಳ್ಳುತ್ತದೆ.

(ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ) ಮಾರ್ಗಸೂಚಿಗಳ ಆಧಾರದ ಮೇಲೆ, ಬೇಸಿಗೆಯಲ್ಲಿ ತರಕಾರಿಗಳನ್ನು ಸಂಗ್ರಹಿಸು ವಾಗ ಹೆಚ್ಚಿನ ತಾಪಮಾನವನ್ನು ನಿರ್ವಹಿಸಲು, ತೇವಾಂಶ ನಷ್ಟವನ್ನು ತಡೆ ಯಲು ಮತ್ತು ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ತಪ್ಪಿಸಲು ಹೆಚ್ಚುವರಿ ಕಾಳಜಿ ವಹಿಸಬೇಕಾಗುತ್ತದೆ.

ಸರಿಯಾದ ತೊಳೆಯುವುದು ಮತ್ತು ಸ್ವಚ್ಛಗೊಳಿಸುವುದು: ತರಕಾರಿಗಳನ್ನು ಶೇಖರಣೆ ಮಾಡುವ ಮೊದಲು ನೀರಿನಿಂದ ಚೆನ್ನಾಗಿ ತೊಳೆದು, ಹೊರಗಡೆ ಬಿಸಿಲಿಗೆ ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಇಡಬೇಕು .

ಎಲೆಗಳ ತರಕಾರಿಗಳನ್ನು, ಒಂದು ಟೀಚಮಚ ಅಡುಗೆ ಸೋಡಾ ಅಥವಾ 1/4 ಕಪ್ ವಿನೆಗರ್ ಬೆರೆಸಿದ ಬೆಚ್ಚಗಿನ ನೀರಿನ ಬಟ್ಟಲಿನಲ್ಲಿ ಅವುಗಳನ್ನು ನೆನೆಸಿಡಬೇಕು.

ಚೆನ್ನಾಗಿ ಒಣಗಿಸಿ: ತರಕಾರಿಗಳನ್ನು ಚೆನ್ನಾಗಿ ನೀರಿನಿಂದ ತೊಳೆದ ನಂತರ, ಹೆಚ್ಚುವರಿ ತೇವಾಂಶದಿಂದ ಉಂಟಾಗುವ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ತಡೆಯಲು ತರಕಾರಿಗಳನ್ನು ಮೃದುವಾದ, ಸ್ವಚ್ಛವಾದ ಮಸ್ಲಿನ್ ಬಟ್ಟೆ ಅಥವಾ ಕಾಗದದ ಟವಲ್‌ನಿಂದ ಒಣಗಿಸಿ.

ಕ್ಯಾರೆಟ್, ಕ್ಯಾಪ್ಸಿಕಂ, ಎಲೆಕೋಸು, ಬ್ರೋಕೋಲಿ ಮತ್ತು ಸೆಲರಿಯಂತಹ ತರಕಾರಿಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಅಥವಾ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಿ ಫ್ರಿಜ್‌ನ ಕ್ರಿಸ್ಪರ್‌ನಲ್ಲಿ ಸಂಗ್ರಹಿಸಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248